ಖಾದಿ ಮಂಡಳಿಯಿಂದ ತೊಡಗಿಸಿರುವ ಠೇವಣಾತಿಯನ್ನು ಮರಳಿಸಲು ಸಹಕಾರ ಬ್ಯಾಂಕುಗಳ ವಿಫಲ

180-ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂರು ಪಟ್ಟಣ ಸಹಕಾರ ಬ್ಯಾಂಕುಗಳು ಖಾದಿ ಮಂಡಳಿಯಿಂದ ತೊಡಗಿಸಿರುವ ಠೇವಣಾತಿಗಳನ್ನು ಮರಳಿಸಲು ವಿಫಲವಾಗಿರುವುದು ನಿಜವೇ?

ಆ) ನಿಜವಾದಲ್ಲಿ ಅಂತಹ ಪಟ್ಟಣ ಸಹಕಾರ ಬ್ಯಾಂಕುಗಳಾವುವು?

ಇ) ಖಾದಿ ಮಂಡಲಿಯು ಇಟ್ಟಿರುವ ಮೊತ್ತವೆಷ್ಟು ? (ಬ್ಯಾಂಕುವಾರು)

ಈ) ಈ ಬ್ಯಾಂಕುಗಳ ಮೇಲೆ ತೆಗೆದುಕೊಂಡ ಕ್ರಮಗಳಾವುವು?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಸಹಕಾರ ಸಚಿವರು) :

ಅ) ನಿಜ, ಎರಡು ಬ್ಯಾಂಕುಗಳು ಠೇವಣಾತಿಗಳನ್ನು ಮರಳಿಸಲು ಸ್ವಲ್ಪ ಕಾಲಾವಕಾಶಬೇಕೆಂದು ಕೇಳಿರುತ್ತವೆ.

ಆ) ಕಾಲಾವಕಾಶ ಕೇಳಿರುವ ಬ್ಯಾಂಕುಗಳು :

1) ಶ್ರೀರಾಮಪುರ ಕೋ-ಆಪರೇಟಿವ್ ಬ್ಯಾಂಕ್ ಲಿ, ಶ್ರೀ ರಾಮಪುರ, ಬೆಂಗಳೂರು.

2) ನವೋದಯ ಸಹಕಾರ ಬ್ಯಾಂಕ್ ಲಿ, ಮಲ್ಲೇಶ್ವರಂ, ಬೆಂಗಳೂರು.

ಇ) ಈ ಬ್ಯಾಂಕುಗಳಲ್ಲಿ ಇಟ್ಟಿರುವ ಮೊತ್ತ ಕೆಳಕಂಡಂತಿರುತ್ತದೆ.

	ಮೊತ್ತ		ಅವಧಿ
1)	ಶ್ರೀ ರಾಮಪುರ ಕೋ-ಆಪರೇಟಿವ್ ಬ್ಯಾಂಕ್ ಲಿ, ಬೆಂಗಳೂರು.	ಎ) 30.00 ಲಕ್ಷ	15-07-1993 ರಿಂದ 15-07-1994 (1 ವರ್ಷ)
		ಬಿ) 20.00 ಲಕ್ಷ	27-07-1993 ರಿಂದ 27-7-1994 (1ವರ್ಷ)
2)	ಆನಂದ ಕೋ-ಆಪರೇಟಿವ್ ಬ್ಯಾಂಕ್ ಲಿ ಬೆಂಗಳೂರು.	ಎ)30.00 ಲಕ್ಷ	31-12-1993 ರಿಂದ 31-12-1994 (1ವರ್ಷ)
3)	ನವೋದಯ ಸಹಕಾರ ಬ್ಯಾಂಕ್ ನಿ ಬೆಂಗಳೂರು.	ಎ) 25.00 ಲಕ್ಷ	26-07-1993 ರಿಂದ 26-01-1994 (6 ತಿಂಗಳು)

ಈ) ಠೇವಣಿಗಳು ಪರಿಪಕ್ವವಾಗಿದ್ದು ಕೇಳಿದಾಕ್ಷಣ ಕೊಡದೆ ಕಾಲಾವಕಾಶ ಕೇಳಿರುವುದರಿಂದ ಸದರಿ ಬ್ಯಾಂಕುಗಳಿಗೆ ಖಾದಿ ಮಂಡಳಿಯವರು ದಿನಾಂಕ: 01-06-1994 ರಂದು ನೋಟೀಸು ನೀಡಿರುತ್ತಾರೆ. ಠೇವಣಾತಿಗಳನ್ನು ಮರಳಿ ಪಡೆಯಲು ಖಾದಿ ಮಂಡಳಿಯವರೇ ಸೂಕ್ತ ಕಾನೂನಿನ ಕ್ರಮಗಳನ್ನು ಕೈಗೊಳ್ಳಬೇಕಾಗಿರುತ್ತದೆ.